ವಿಶ್ವವಾಣಿ

ಸಂಪಾದಕೀಯ

ಇದೆಂಥ ಬೆಳವಣಿಗೆ

ಇ ಕಾಮರ್ಸ್ ಕಂಪನಿ ಅಮೆಜಾನ್ ತಾತ್ಕಾಲಿಕವಾಗಿ 20 ಸಾವಿರ ಸಿಬ್ಬಂದಿಯನ್ನು ಗ್ರಾಹಕ ಸೇವಾ ವಿಭಾಗಕ್ಕೆ ನೇಮಿಸಿಕೊಳ್ಳುವುದಾಗಿ ತಿಳಿಸಿದೆ. ಖಾಸಗಿ ಕಂಪನಿ ಇಷ್ಟೊಂದು ಸಿಬ್ಬಂದಿಯನ್ನು ನೇಮಿಸಿಕೊಳ್ಳುವುದು ವಿಶೇಷವಲ್ಲ, ಆದರೆ ಇದರಿಂದ ನಾವೀಗ ಗಮನಿಸಬೇಕಿರುವುದು ಬಹಳಷ್ಟಿದೆ. ಇಂದು ಬಹಳಷ್ಟು ಕಂಪನಿಗಳು ಕರೋನಾ ಸಂಕಷ್ಟದಿಂದ ಬಾಗಿಲು ಮುಚ್ಚುತ್ತಿವೆ. ಕೆಲವು ಕಂಪನಿಗಳು ಉದ್ಯೋಗ ಕಡಿತಕ್ಕೆ ಮುಂದಾಗಿವೆ. ಆದರೆ ಇದೀಗ ಇ ಕಾಮರ್ಸ್ ಕಂಪನಿಯೊಂದು ಈ ಪ್ರಮಾಣದಲ್ಲಿ ಉದ್ಯೋಗಿ ಗಳನ್ನು ನೇಮಿಸಿಕೊಳ್ಳುವುದನ್ನು ಗಮನಿಸಿದರೆ ಸರಕಾರಿ ಸ್ವಾಮ್ಯದ ಕಂಪನಿ ಗಳೇಕೆ ಬಾಗಿಲು ಮುಚ್ಚುತ್ತಿವೆ ಎಂಬ ಪ್ರಶ್ನೆಗಳು ಸುಳಿಯುತ್ತವೆ. ಇತ್ತೀಚಿನ ಬೆಳವಣಿಗೆಯಲ್ಲಿ ಸರಕಾರಿ ಸಂಸ್ಥೆಗಳೆಲ್ಲವೂ ಅವನತಿಯತ್ತ, ಅಳಿವಿನಂಚಿನತ್ತ ಸಾಗುತ್ತಿದ್ದರೆ ಖಾಸಗಿ ಕಂಪನಿಗಳು ಮಾತ್ರ ಪ್ರಗತಿಯತ್ತ ಸಾಗುತ್ತಿವೆ. ಈ ಬೆಳವಣಿಗೆ ಸರಕಾರಿ ಕಂಪನಿಗಳಲ್ಲಿ ಕಂಡುಬರುತ್ತಿರುವ ನಿರ್ಲಕ್ಷ್ಯಕ್ಕಿದು ಸಾಕ್ಷಿಯಂತಿದೆ. ಅದೇ ರೀತಿ ಸರಕಾರವೂ ಸಹ ಇಂದು ಬಹಳಷ್ಟು ಉದ್ಯೋಗ ನೇಮಕಾತಿಗಳನ್ನು ಉಳಿಸಿ ಕೊಂಡಿರುವುದು ಸರಿಯಾದ ಬೆಳವಣಿಗೆಯಲ್ಲ. ಕರೋನಾ ನಿಯಂತ್ರಣದಲ್ಲಿ ಹಗಲಿರುಳು ಶ್ರಮಿಸುತ್ತಿರುವ ಪೊಲೀಸ್ ಸಿಬ್ಬಂದಿ ಹಾಗೂ ವೈದ್ಯಕೀಯ ಸಿಬ್ಬಂದಿಗಳಲ್ಲಿ ಕೆಲವರು ಸೋಂಕಿಗೆ ಒಳಗಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಜತೆಗೆ ದಿನೇ ದಿನೇ ಉಲ್ಬಣಿಸುತ್ತಿರುವ ಸಮಸ್ಯೆಯಿಂದಾಗಿ ಸಿಬ್ಬಂದಿಗಳ ಹೆಚ್ಚಳವೂ ಅಗತ್ಯವಾಗಿದೆ. ಆದರೆ ಸರಕಾರಗಳು ಈ ಸಂದರ್ಭದಲ್ಲಿ ವೈದ್ಯಕೀಯ ಹಾಗೂ ಪೊಲೀಸ್ ಇಲಾಖೆಯಲ್ಲಿ ಶೀಘ್ರವೇ ಸಿಬ್ಬಂದಿಗಳ ನೇಮಕಾತಿಗೆ ಮುಂದಾಗಬೇಕಿರುವುದು ಮುಖ್ಯ. ಸರಕಾರ ಅಂಗಸಂಸ್ಥೆಗಳಾದ ಸರಕಾರಿ ಸ್ವಾಮ್ಯದ ಕಂಪನಿಗಳನ್ನು ಸಹ ಸುಸ್ಥಿತಿಯಲ್ಲಿ ಮುನ್ನಡೆಸುವುದು ಹಾಗೂ ಸರಕಾರದ ಇಲಾಖೆಗಳಲ್ಲಿ ಸಮರ್ಪಕವಾದ ಉದ್ಯೋಗ ನೇಮಕಾತಿಗಳನ್ನು ಒದಗಿಸಬೇಕಿರುವುದು ಸರಕಾರಗಳ ಜವಾಬ್ದಾರಿ. ಆದರೆ ಇತ್ತೀಚಿನ ಬೆಳವಣಿಗೆಗಳನ್ನು ಗಮನಿಸಿದರೆ ಸರಕಾರಗಳು ಸರಕಾರಿ ಸ್ವಾಮ್ಯದ ಕಾರ್ಖಾನೆ ಉಳಿಸಿಕೊಳ್ಳುವುದಕ್ಕಿಂತಲೂ ಹೆಚ್ಚಾಗಿ, ಖಾಸಗಿ ಕೈಗಾರಿಕೆಗಳನ್ನು ಆರಂಭಿಸುವವರಿಗೆ ಹೆಚ್ಚಿನ ಸೌಲಭ್ಯ ಒದಗಿಸಲು ಮುಂದಾಗುತ್ತಿರುವ ಬೆಳವಣಿಗೆ ಕಂಡುಬರುತ್ತಿದೆ. ಇಂತಹ ಬೆಳವಣಿಗೆ ಸರಿಯಾದ ಕ್ರಮವಲ್ಲ.



ಸೊಂಪಾದಕೀಯ

‘ಇಷ್ಯೂನಾಥ’ರ ಹೊಸ ಇಷ್ಯೂ

ಎಚ್ ವಿಶ್ವನಾಥ್. ಹೀಗಂದರೆ ಎಲ್ಲರಿಗೂ ಅರ್ಥ ಆಗಲಿಕ್ಕಿಲ್ಲ. ಅಡಗೂರು ವಿಶ್ವನಾಥ್ ಅಂದರೆ ತಕ್ಷಣ ಬಹುತೇಕರಿಗೆ ಗೊತ್ತಾದೀತು. ಹಳ್ಳಿಹಕ್ಕಿ ಎಂದರೆ ಇನ್ನೂ ಬೇಗ ತಿಳಿದೀತು. ಏನಕೇನ ಪ್ರಕಾರೇಣ ಸುದ್ದಿಯಲ್ಲಿರುವಂಥವರು. ಅವರ ವ್ಯಕ್ತಿತ್ವವೇ ಅಂಥಾದ್ದು. ಬಹುಮುಖ ಪ್ರತಿಭೆ, ಬಹುಶ್ರುತ ಒಲುಮೆ, ನಿಲುಮೆ. ರಾಜಕಾರಣ, ಸಾಹಿತಿ ಹೀಗೆ ನಾನಾ ಹೊದಿಕೆಯುಳ್ಳವರು. ನೇರ ನಿಷ್ಠುರ ಎಂಬುದೇ ಅವರ ಸ್ಪೆಷಾಲಿಟಿ. ಈ ನೇರ ನುಡಿಯಿಂದಲೇ ಅವರು ಜನಪ್ರಿಯರೂ ಆಗಿದ್ದಾರೆ, ಅನೇಕ ಸಲ ಸಣ್ಣವರೂ ಆಗಿದ್ದಾರೆ. ಸದಾ ಏನಾದರೊಂದು ವಿವಾದ ಹುಟ್ಟುಹಾಕುವುದು ಅವರ ಜಾಯಮಾನ. ಅದಕ್ಕೇ ಅವರಿಗೆ ‘ಇಷ್ಯೂನಾಥ’ ಎಂಬ ಬಿರುದೂ ಉಂಟು. ಸಾಕಷ್ಟು ಅಧಿಕಾರ ಅನುಭವಿಸಿದ್ದರೂ ಅಧಿಕಾರ ಎಂಬುದು ಮರೀಚಿಕೆಯಾದ ಪ್ರಸಂಗಗಳೇ ಹೆಚ್ಚು. ಅಧಿಕಾರಕ್ಕಾಗಿ ಅಧಿಕಾರದಿಂದ ಹೋರಾಟ ಮಾಡಿದ್ದಾರೆ. ಸಿದ್ದರಾಮಯ್ಯ ಅವರನ್ನು ಕಾಂಗ್ರೆಸ್‌ಗೆ ಕರೆತಂದರು. ಸಿದ್ದರಾಮಯ್ಯ ಮುಖ್ಯಮಂತ್ರಿಯಾದರು. ಆದರೆ ಇವರು ಸೈಡಲ್ಲೇ ಉಳಿದರು. ಇದರಿಂದ ರೋಸಿ ದಳದತ್ತ ಹೆಜ್ಜೆಹಾಕಿದರೂ ದಳಪತಿಗಳೆದುರು ಪಾಳೇಗಾರ ಮನಸ್ಥಿತಿಯ ಇವರ ಆಟ ಹೇಗೆ ನಡೆದೀತು. ಹಳ್ಳಿಹಕ್ಕಿ ಮತ್ತೆ ಗುಂಪು ಕಟ್ಟಿಕೊಂಡು ಬಿಜೆಪಿ ಮರದ ಆಶ್ರಯ ಪಡೆಯಿತು. ಬೇರೆಲ್ಲ ಹಕ್ಕಿಗಳಿಗೆ ಗೂಡು ಸಿಕ್ಕಿತಾದರೂ ಈ ಹಕ್ಕಿಗೆ ಮತ್ತೆ ರೆಂಬೆಯೇ ಗತಿ. ಅಲ್ಲಿಗೆ ವಿಶ್ವನಾಥ ಮತ್ತೆ ಅನಾಥ ಎಂಬಂತಾಯಿತು. ಅಧಿಕಾರ ಇಲ್ಲದಿರುವಾಗ ಸಾಹಿತಿಯಾಗುವುದು ಅವರಿಗೆ ಒಂಥರಾ ಉಪಕಸುಬು ಇದ್ದಂತೆ ಅಂತ ಕಾಣುತ್ತೆ. ಅವರ ‘ಹಳ್ಳಿ ಹಕ್ಕಿ’ ಪುಸ್ತಕ ಸಾಕಷ್ಟು ಸಂಚಲನ ಸೃಷ್ಟಿಸಿದ್ದು ನಿಜ. ಈಚಿನ ರಾಜಕೀಯ ಬೆಳವಣಿಗೆಯ ಬಳಿಕ ‘ಆಪರೇಷನ್ ಕಮಲ’ ಎನ್ನುವ ಪುಸ್ತಕ ಬರೆಯುವುದಾಗಿ ಪ್ರಕಟಿಸಿದ್ದರಾದರೂ ಅದು ಬಂತೋ ಇಲ್ಲವೋ ಗೊತ್ತಾಗಲಿಲ್ಲ. ಇದೀಗ ಮತ್ತೆ ‘ಬಾಂಬೆ ಡೇಸ್’ ಎಂಬ ಪುಸ್ತಕ ಬರೆಯುವುದಾಗಿ ತಿಳಿಸಿದ್ದಾರೆ. ಆಪರೇಷನ್ ಕಮಲ ಕಾಲಕ್ಕೆ ಮುಂಬೈಯಲ್ಲಿದ್ದಾಗ ಏನೇನಾಯಿತು ಎಂಬುದೆಲ್ಲವನ್ನು ಇದರಲ್ಲಿ ದಾಖಲಿಸುತ್ತಾರಂತೆ. ಇದರಲ್ಲಿ ಬಾಂಬೆ ಸಾಲ್ಟ್ ಥರ ಮಸಾಲೆ ಇರುವುದೋ ಹೇಗೆಂಬುದೇ ಈಗಿರುವ ಕುತೂಹಲ. ಇದುವರೆಗೆ 8 ಪುಸ್ತಕಗಳನ್ನು ಬರೆದಿರುವ ಅವರು ಆಪರೇಷನ್ ಕಮಲ ಬಂದರೆ 9, ಈ ಬುಕ್ ಬಂದರೆ ಹತ್ತು ಆಗುತ್ತದೆ. ಅನಂತರ ಮತ್ತೊಂದು ಬಂದೀತು. ಆದರೆ ಇವೆಲ್ಲ ಹತ್ತರ ಕೂಡ ಹನ್ನೊಂದು ಎಂಬಂತೆ ಆಗಬಾರದು ಅಷ್ಟೆ. ಆದರೂ ಬಾಂಬೆ ಡೇಸ್ ಅಂದರೆ ಮಾಲ್ಗುಡಿ ಡೇಸ್ ಥರ ನಿರೀಕ್ಷೆ ಇಟ್ಕೋಬೇಡಿ.

ಸಂಪಾದಕರ ಸದ್ಯಶೋಧನೆ

ವಿಮಾನ ಪ್ರಯಾಣದ ಕೌತುಕ

ಐದಾರು ವರ್ಷಗಳ ಹಿಂದೆ ಒಮ್ಮೆ ನಾನು ಸಿಂಗಾಪುರದಿಂದ ಮಧ್ಯರಾತ್ರಿ ಫ್ಲೈಟ್‌ನಲ್ಲಿ ಬೆಂಗಳೂರಿಗೆ ಬರುತ್ತಿದ್ದೆ. ವಿಮಾನ ಟೇಕಾಫ್ ಆಗಿ ಎರಡು ಗಂಟೆ ಆಗಿತ್ತು. ಅಂದರೆ ವಿಮಾನ ಅರ್ಧ ಹಾದಿ ಕ್ರಮಿಸಿತ್ತು. ಎಲ್ಲರಿಗೂ ಗಾಢ ನಿದ್ದೆ. ನನ್ನ ಮುಂದಿನ ಸ್ಕ್ರೀನ್‌ನಲ್ಲಿ ವಿಮಾನ ಅಲ್ಲಿ ಗಿರಕಿ ಹೊಡೆಯುತ್ತಿರುವುದು ವಿಮಾನ ಪಥದಿಂದ ಗೊತ್ತಾಯಿತು. ನನಗೆ ಸಣ್ಣ ದಿಗಿಲು. ಅರ್ಧ ದಾರಿ ಕ್ರಮಿಸಿದ ಬಳಿಕ ಹೀಗೇಕೆ ಗಿರಕಿ ಹೊಡೆಯುತ್ತಿದ್ದಾನೆ ಎಂಬ ಕೌತುಕ. ಅದಾದ ಕೆಲವೇ ಕ್ಷಣಗಳಲ್ಲಿ, ಪೈಲಟ್ ತುರ್ತುಸ್ಥಿತಿಯನ್ನು ಘೋಷಿಸಿದ. ವಿಮಾನದೊಳಗಿನ ಎಮರ್ಜೆನ್ಸಿ ಲೈಟ್ಸ್ ಬಿಟ್ಟರೆ ಉಳಿದ ಲೈಟ್‌ಗಳು ಆನ್ ಆಗುತ್ತಿರಲಿಲ್ಲ. ಒಂಥರಾ ಕತ್ತಲು ಆವರಿಸಿತ್ತು. ಏರ್ ಕಂಡೀಶನ್ ಕೆಟ್ಟು ಹೋಗಿತ್ತು. ಏಕಾಏಕಿ ಎಲ್ಲರೂ ಬೆವರಲಾರಂಭಿಸಿದರು. ಪ್ರಯಾಣವನ್ನು ಬೆಂಗಳೂರಿಗೆ ಮುಂದುವರಿಸಬೇಕಾ, ವಾಪಸ್ ಸಿಂಗಾಪುರ್‌ಗೆ ಹೋಗಬೇಕಾ ಎಂಬ ದ್ವಂದ್ವ ಪೈಲಟ್‌ನನ್ನು ಕಾಡಿರಬೇಕು. ವಿಮಾನದೊಳಗೆ ಹಠಾತ್ತನೆ ಕೋಲಾಹಲ ಎದ್ದುಬಿಟ್ಟಿತು. ಎಲ್ಲರೂ ತಮ್ಮ ಇಷ್ಟದ ದೇವರನ್ನು ಸ್ಮರಿಸಲಾರಂಭಿಸಿದರು. ನನ್ನ ಪಕ್ಕದಲ್ಲಿದ್ದ ಹೆಂಗಸು ಹೆದರಿಕೆಯಿಂದ ನನ್ನ ಕೈಯನ್ನು ಚರ್ಚರಿಯಾಗಿ ಹಿಡಿದ ಹೊಡೆತಕ್ಕೆ ಕನ್ನೆತ್ತರುಗಟ್ಟಿತ್ತು. ತಾನು ಜೀವ ಸಹಿತ ಮರಳಲಾರೆವು ಎಂದು ಬಹುತೇಕರಿಗೆ ಖಾತ್ರಿಯಾಗಿತ್ತು. ಪೈಲಟ್ ಕೂಡ ಸುಮ್ಮನಾಗಿದ್ದ. ಆತ ಮಾತಾಡಿದರೂ ಭಯ, ಮಾತಾಡದೆ ಸುಮ್ಮನಿದ್ದರೆ ಇನ್ನೂ ಭಯ. ಗಗನಸಖಿಯರೂ ಸೀಟ್ ಬೆಲ್ಟ್ ಕಟ್ಟಿಕೊಂಡು ಸುಮ್ಮನಿದ್ದುಬಿಟ್ಟಿದ್ದರು. ಆ ಎರಡು ತಾಸು ಸಾವಿನ ಮನೆಯ ಕದ ತಟ್ಟಿ ಬಂದ ಅನುಭವ ! ಕೊನೆಗೆ ಸಿಂಗಾಪುರ ವಿಮಾನ ನಿಲ್ದಾಣದಲ್ಲಿ ಇಳಿದಾಗ ಎಲ್ಲಾ ಪ್ರಯಾಣಿಕರಿಂದ ದೀರ್ಘ ಕರತಾಡನ, ಪರಸ್ಪರ ಅಪ್ಪುಗೆ. ಕೆಲವರಂತೂ ನೆಲವನ್ನು ಚುಂಬಿಸಿದರು. ಪೈಲಟ್‌ನನ್ನು ಅಭಿನಂದಿಸಿದರು. ಮರು ಜನ್ಮ ಪಡೆದ ಹಿತಾನುಭವ. ನನ್ನ ಸ್ನೇಹಿತರೊಬ್ಬರು ಮೊದಲ ಬಾರಿಗೆ ವಿಮಾನದಲ್ಲಿ ಹೋಗುವಾಗ, ಟೇಕಾಫ್ ಆಗುವ ಮುನ್ನ ಗಗನಸಖಿಯ ‘ಸುರಕ್ಷತೆಯ ಸೂಚನಾ ಪ್ರದರ್ಶನ’ ಕಂಡು, ದಿಗಿಲುಗೊಂಡು ವಿಮಾನದಲ್ಲಿ ಪ್ರಯಾಣಿಸುವುದಿಲ್ಲ, ತನ್ನನ್ನು ಇಲ್ಲೇ ಇಳಿಸಿಬಿಡಿ ಎಂದು ಹಠ ಹಿಡಿದಿದ್ದರು. ಕಾರಣ, ಗಗನಸಖಿ ಆರಂಭದಲ್ಲಿ ಸುರಕ್ಷತೆಯ ಬಗ್ಗೆ ಹೇಳುವಾಗ, ‘ಒಂದು ವೇಳೆ ವಿಮಾನದಲ್ಲಿ ಆಮ್ಲಜನಕ ಕಡಿಮೆಯಾಗಿ ಉಸಿರಾಟಕ್ಕೆ ತೊಂದರೆಯಾದರೆ ಈ ಮಾಸ್ಕ್ ಹಾಕಿಕೊಳ್ಳಿ, ವಿಮಾನವೇನಾದರೂ ನೀರಿನಲ್ಲಿ ಇಳಿಯುವ ಪ್ರಸಂಗ ಬಂದರೆ ಜೀವರಕ್ಷಕ ಜಾಕೆಟ್ ಧರಿಸಿ’ ಎಂದು ಹೇಳಿದ್ದನ್ನು ಕೇಳಿ ಆತ ಬೆಚ್ಚಿ ಬಿದ್ದು, ವಿಮಾನ ಹಾರಾಟವೇ ಬೇಡ ಎಂಬ ನಿರ್ಧಾರಕ್ಕೆ ಬಂದಿದ್ದ. ಅವನಿಗೆ ಸಮಾಧಾನ ಮಾಡುವ ಹೊತ್ತಿಗೆ ಏಳೋ ಹನ್ನೊಂದೋ ಆಗಿತ್ತು. ಸಿನಿಮಾ ನಟ ಡಾ.ವಿಷ್ಣುವರ್ಧನ್ ‘ಸಾಹಸಸಿಂಹ’ ಎಂದೇ ಜನಪ್ರಿಯ. ಆದರೆ ವಿಮಾನ ಪ್ರಯಾಣವೆಂದರೆ, ಅವರು ಪುಕ್ಕಲು ನರಿ! ಭಯ ಅಂದ್ರೆ ಭಯ. ಒಮ್ಮೆ ಅವರು ಬೆಂಗಳೂರಿನಿಂದ ಹೈದರಾಬಾದ್‌ಗೆ ಹೋಗಲು ವಿಮಾನವೇರಿದರಂತೆ. ಒಳಗೆ ಪುಕಪುಕಿ. ವಿಮಾನ ಟೇಕಾಫ್ ಆಗಿದ್ದೇ ತಡ ಜೋರಾಗಿ ಕಿರುಚಲಾರಂಭಿಸಿದರಂತೆ. ಎಷ್ಟೇ ಸಮಾಧಾನಪಡಿಸಿದರೂ ಪ್ರಯೋಜನ ವಾಗಲಿಲ್ಲ. ಕೊನೆಗೆ ಪೈಲಟ್ ವಾಪಸ್ ಬೆಂಗಳೂರಿಗೆ ತಿರುಗಿಸಿ ವಿಷ್ಣು ಅವರನ್ನು ಇಳಿಸಿ ಹೋದರಂತೆ ! ಆಗಲೇ ಸಾಹಸಸಿಂಹ ಘರ್ಜಿಸುವುದನ್ನು ನಿಲ್ಲಿಸಿದ್ದು!! ಕೆಲವರು ಈ ಕಾರಣಕ್ಕೆ ವಿದೇಶಗಳಿಗೆ ಹೋಗುವುದಿಲ್ಲ. ಜೀವನದಲ್ಲಿ ಸಿಕ್ಕಾಪಟ್ಟೆ ಗಳಿಸಿರುತ್ತಾರೆ. ಆದರೆ ಒಂದೇ ಒಂದು ದೇಶವನ್ನು ನೋಡಿರುವುದಿಲ್ಲ. ಕೇಳಿದರೆ, ನನಗೆ ವಿದೇಶ ಅಂದ್ರೆ ವಾಕರಿಕೆ, ಆಗಿಬರೊಲ್ಲ ಎಂದೆಲ್ಲಾ ರೀಲು ಸುತ್ತುತ್ತಾರೆ. ಆದರೆ ಅಸಲಿಗೆ ಅವರಿಗೆ ವಿಮಾನ ಪ್ರಯಾಣ ಅಂದ್ರೆ ವಿಪರೀತ ಭಯವಿರುತ್ತದೆ. ಆದರೆ ಅದನ್ನು ಹೇಳುವುದಿಲ್ಲ ಅಷ್ಟೇ.

ನಿಯಂತ್ರಣ ತಪ್ಪಲು ಕಾರಣರು ಯಾರು?

ಅಶ್ವತ್ಥಕಟ್ಟೆ

ರಂಜಿತ್ ಎಚ್.ಅಶ್ವತ್ಥ
ranjith.hosakere@gmail.com

ಇಡೀ ವಿಶ್ವವನ್ನು ಕಾಡಿದ ಕರೋನಾ ಕಳೆದೊಂದು ವಾರದಿಂದ ಕರ್ನಾಟಕದಲ್ಲಿ ಎಗ್ಗಿಲ್ಲದೇ ಹರಡುತ್ತಾ ಸಾಗಿದೆ. ಆರಂಭದಲ್ಲಿ ಎರಡಂಕಿಗೆ ಸೀಮಿತಗೊಂಡಿದ್ದ ಸೋಂಕಿನ ಸಂಖ್ಯೆ ಇದೀಗ ನಾಲ್ಕು ಅಂಕಿಗೆ ಏರಿದೆ. ಈ ರೀತಿ ರಾಜ್ಯದಲ್ಲಿ ನಿಯಂತ್ರಣ ಮೀರಿ ಹಬ್ಬುತ್ತಿರುವುದಕ್ಕೆ ಕಾರಣವೇನು ಎನ್ನುವುದಕ್ಕೆ, ಒಬ್ಬರ ಬಳಿ ಒಂದೊಂದು ಕಾರಣಗಳಿವೆ. ಆದರೆ ಕಾರಣರ್ಯಾರು ಎನ್ನುವುದನ್ನು ನೋಡುವುದಾದರೆ, ಇದರಲ್ಲಿ ಪ್ರತಿಯೊಬ್ಬರ ಪಾತ್ರವಿದೆ ಎನ್ನುವುದು ಸುಳ್ಳಲ್ಲ.

ರಾಜ್ಯದಲ್ಲಿ ಕರೋನಾ ನಿಯಂತ್ರಣ ತಪ್ಪುವುದಕ್ಕೆ ಯಾರು ಕಾರಣವೆಂದು ಕಾಂಗ್ರೆಸ್-ಜೆಡಿಎಸ್‌ನವರ ಬಳಿ ಕೇಳಿದರೆ, ಅದಕ್ಕೆ ರಾಜ್ಯವನ್ನು ನಡೆಸುತ್ತಿರುವ ಮುಖ್ಯಮಂತ್ರಿ ಯಡಿಯೂರಪ್ಪ ನೇತೃತ್ವದ ರಾಜ್ಯ ಸರಕಾರ ಕಾರಣವೆಂದು ಒಂದೇ ಉಸಿರಲ್ಲಿ ಹೇಳಿ ಮುಗಿಸುತ್ತಾರೆ. ಇನ್ನು ಬಿಜೆಪಿಯವರ ಬಳಿ ಹೋಗಿ ಕೇಳಿದರೆ, ರಾಜ್ಯ ಸರಕಾರ ಅತ್ಯುತ್ತಮ ರೀತಿಯಲ್ಲಿ ಕರೋನಾವನ್ನು ನಿಭಾಯಿಸಿದೆ. ಈಗ ಸೋಂಕು ಹೆಚ್ಚುತ್ತಿರುವುದಕ್ಕೆ, ಜನ ಮನೆಯಿಂದ ಆಚೆ ಬರುತ್ತಿರುವುದೇ ಕಾರಣ. ಅವರು ಮನೆಯಲ್ಲೇ ಇದ್ದರೆ, ಸೋಂಕು ಬರುವುದಿಲ್ಲ ಎನ್ನುವ ಮಾತನ್ನು ಗಟ್ಟಿ ಧ್ವನಿಯಲ್ಲಿ ಹೇಳುತ್ತಾರೆ. ಆದರೆ ಇದೇ ಪ್ರಶ್ನೆಯನ್ನು ಜನರ ಬಳಿ ಹೋಗಿ ಕೇಳಿದರೆ, ‘ಅಯ್ಯೋ ನಾವು ಮನೆಯಿಂದ ಆಚೆ ಬರುತ್ತಿರುವುದಕ್ಕೆ ಕಾರಣ ಸರಕಾರ ಮಾಡಿರುವ ಅನ್‌ಲಾಕ್ ಪ್ರಕ್ರಿಯೆ’ ಎನ್ನುವ ಮಾತನ್ನು ಘಂಟಾಘೋಷವಾಗಿ ಹೇಳುತ್ತಾರೆ. ಈಗಲೂ ಲಾಕ್‌ಡೌನ್ ಮಾಡಲಿ ನಾವು ಮನೆಯಲ್ಲಿ ಇರುತ್ತೇವೆ ಎನ್ನುತ್ತಾರೆ. ಇದೇ ಚೆಂಡನ್ನು ಸರಕಾರದ ಅಂಗಳಕ್ಕೆ ಹಾಕಿದರೆ, ‘ನೋಡಿ ಲಾಕ್‌ಡೌನ್ ಮಾಡುವುದರಿಂದ ರಾಜ್ಯ ಖಜಾನೆ ಖಾಲಿಯಾಗುತ್ತದೆ. ಅದನ್ನು ಮಾಡಲು ಸಾಧ್ಯವಿಲ್ಲ. ಜನರೇ ಮುನ್ನೆಚ್ಚರಿಕೆ ವಹಿಸಿ ಜೀವನ ಸಾಗಿಸಬೇಕು’ ಎನ್ನುವ ಸಿದ್ಧ ಉತ್ತರವನ್ನು ನೀಡುತ್ತಿದ್ದಾರೆ. ಇನ್ನು ಇದಕ್ಕೆ ಪೂರಕ ಎನ್ನುವ ರೀತಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಸಹ, ‘ಈಗ ನಾವು ಕರೋನಾದೊಂದಿಗೆ ಜೀವನ ಸಾಗಿಸಬೇಕು. ಲಾಕ್‌ಡೌನ್ ಬದಲು ಅನ್‌ಲಾಕ್‌ನಲ್ಲಿಯೂ ಕರೋನಾ ವಿರುದ್ಧ ಗೆಲುವು ಸಾಧಿಸಬೇಕು’ ಎನ್ನುವ ಮಾತನ್ನು ಹೇಳಿದ್ದಾರೆ. ಮೋದಿ ಅವರ ಈ ಮಾತು ಕರ್ನಾಟಕವನ್ನು ಆಳುತ್ತಿರುವ ನಾಯಕರಿಗೆ ಸಿಕ್ಕಿರುವ ‘ಬ್ರಹ್ಮಾಸ್ತ್ರ’ ಎಂದರೆ ತಪ್ಪಾಗಲಿಕ್ಕಿಲ್ಲ.

ಆದರೆ ಈ ಎಲ್ಲದರ ನಡುವೆ ಕರೋನಾದ ತಜ್ಞರ ಸಮಿತಿಯ ಪ್ರಕಾರ, ಸದ್ಯಕ್ಕೆ ಈ ಸೋಂಕು ನಿಯಂತ್ರಣಕ್ಕೆ ಬರುವುದಿಲ್ಲ. ಇನ್ನು ಎರಡು ಮೂರು ತಿಂಗಳು ಇದೇ ರೀತಿಯ Spike up ಆಗುತ್ತಲೇ ಇರುತ್ತದೆ ಎನ್ನುವುದು ಸ್ಪಷ್ಟ ಎನ್ನುವ ಎಚ್ಚರಿಕೆಯನ್ನು ನೀಡುತ್ತಲೇ ಇದ್ದಾರೆ. ಈ ರೀತಿಯ ಸ್ಪಷ್ಟ ಎಚ್ಚರಿಕೆಯನ್ನು ನೀಡುತ್ತಿದ್ದರೂ, ರಾಜ್ಯ ಸರಕಾರವಾಗಲಿ, ಜನರಾಗಲಿ ಹೆಚ್ಚಾಗಿ ಈ ಎಚ್ಚರಿಕೆಯ ಮಾತುಗಳನ್ನು ಹೆಚ್ಚು ತಲೆಕೆಡಿಸಿಕೊಂಡಂತೆ ಕಾಣುತ್ತಿಲ್ಲ. ಬೆಂಗಳೂರು ಒಂದರಲ್ಲೇ ದಿನಕ್ಕೆ 500, 800 ಚಿಲ್ಲರೆ ಪ್ರಕರಣಗಳು ಕಾಣಿಸಿಕೊಳ್ಳುತ್ತಿದ್ದರೂ, ಈಗಲೂ ಸರಕಾರದಿಂದ ಬರುತ್ತಿರುವ ಒಂದೇ ಉತ್ತರ ‘ರಾಜ್ಯದಲ್ಲಿ ಕರೋನಾ ನಿಯಂತ್ರಣದಲ್ಲಿದೆ!’ ಎನ್ನುವುದು. ಲಾಕ್‌ಡೌನ್ ತೆರವುಗೊಳಿಸುವ (ಈಗಿರುವ ಲಾಕ್‌ಡೌನ್ ನಾಮ್‌ಕೆವಸ್ತೆ ಎನ್ನುವುದು ಬಿಡಿಸಿ ಹೇಳಬೇಕಿಲ್ಲ) ಮೊದಲು ಒಂದು ಹಂತದಲ್ಲಿ ಬೆಂಗಳೂರಲ್ಲಿ ಸತತವಾಗಿ ನಾಲ್ಕೈದು ದಿನ ಒಂದೇ ಒಂದು ಪ್ರಕರಣ ಕಾಣಿಸಿಕೊಂಡಿರಲಿಲ್ಲ. ಆದರೀಗ ಅನ್‌ಲಾಕ್ ಮಾಡಿದ ಒಂದು ತಿಂಗಳಿಗೆ ಸರಿಯಾಗಿ ರಾಜಧಾನಿ ಬೆಂಗಳೂರು ಒಂದರಲ್ಲೇ 500ಕ್ಕಿಂತ ಹೆಚ್ಚು ಪ್ರಕರಣಗಳು ಕಾಣಿಸಿಕೊಂಡಿವೆ. ಸರಕಾರ ಅನ್‌ಲಾಕ್‌ಗೆ ಹೆಚ್ಚು ಒತ್ತು ಕೊಡುತ್ತಿದ್ದಂತೆ, ಅನ್‌ಲಾಕ್ ಮಾಡಿದಷ್ಟೇ ವೇಗವಾಗಿ ಕರೋನಾ ಸೋಂಕು ಕೂಡ ಜನರನ್ನು ಹಬ್ಬುತ್ತಿದೆ. ಬೆಂಗಳೂರಿನಲ್ಲಿರುವ 198 ವಾರ್ಡ್‌ಗಳ ಬಹುತೇಕ ವಾರ್ಡ್‌ಗಳಲ್ಲಿ ಸೋಂಕಿತರಿದ್ದಾರೆ ಎನ್ನುವುದು ಒಪ್ಪಲೇಬೇಕು.

ಇನ್ನು ಈ ರೀತಿ ಲಾಕ್‌ಡೌನ್ ತೆರವಾಗುತ್ತಿದ್ದಂತೆ ಸೋಂಕು ಹೆಚ್ಚಾಗಲು ಕಾರಣ ಸ್ಪಷ್ಟ. ಚೀನಾದಿಂದ ಆಮದಾಗಿ ಬಂದ ಕರೋನಾವನ್ನು ನಿಯಂತ್ರಿಸಲು ಕೇಂದ್ರ ಸರಕಾರ ಲಾಕ್‌ಡೌನ್ ಮಾಡುವ ಮೊದಲೇ ಕರ್ನಾಟಕ ಲಾಕ್‌ಡೌನ್ ಮಾಡಿಕೊಂಡಿತ್ತು. ಆ ಸಮಯದಲ್ಲಿ ಜನ ಸಂಪರ್ಕ ಕಡಿಮೆಯಿದ್ದಿದ್ದರಿಂದ, ಕೇವಲ ಸೋಂಕಿತರ ಸಂಪರ್ಕಿತರಲ್ಲಿ ಮಾತ್ರ ಕರೋನಾ ಕಾಣಿಸಿಕೊಂಡಿತ್ತು. ಈ ವೇಳೆ ತಬ್ಲಿಘಿ, ಪಾದರಾಯನಪುರದಂತಹ ಕೆಲವು ಎಡವಟ್ಟು ಬಿಟ್ಟರೆ ಸೋಂಕು ಹಬ್ಬಲು ಇನ್ಯಾವ ಕಾರಣಗಳೂ ಇರಲಿಲ್ಲ. ಇಡೀ ರಾಜ್ಯವೇ ಸಂಪೂರ್ಣ ಲಾಕ್ ಆಗಿದ್ದರಿಂದ ಹೊರಬರುತ್ತಿದ್ದ ಅಥವಾ ಸೋಂಕಿತರೊಂದಿಗೆ ಸಂಪರ್ಕದಲ್ಲಿದ್ದ ಹಾಗೂ ಪುಂಡಾಟಿಕೆಗೆ ಮನೆಯಿಂದ ಆಚೆ ಬರುತ್ತಿದ್ದವರಿಗೆ ಮಾತ್ರ ಸೋಂಕು ತಗುಲುವ ಅವಕಾಶವಿತ್ತು. ಆದರೆ ಅಂತಾರಾಷ್ಟ್ರೀಯ, ಅಂತಾರಾಜ್ಯ, ಅಂತರ ಜಿಲ್ಲಾ ಸಾರಿಗೆ ಸಂಪರ್ಕಕ್ಕೆ ಅನುವು ಮಾಡಿಕೊಟ್ಟ ಬೆನ್ನಲೇ ಇಡೀ ರಾಜ್ಯವನ್ನು ತೆರದ ಪರಿಣಾಮ ಇದೀಗ ಕರ್ನಾಟಕದಲ್ಲಿ ಏರಿಕೆಯಾಗುತ್ತಿರುವ ಸೋಂಕಿಗೆ ಕಾರಣ ಎನ್ನುವುದನ್ನು ಒಪ್ಪಲೇಬೇಕು.

ಅಂತಾರಾಷ್ಟ್ರೀಯ ಹಾಗೂ ಅಂತಾರಾಜ್ಯ ಸಾರಿಗೆ ವ್ಯವಸ್ಥೆ ಕಲ್ಪಿಸಿದಾಗ ಒಂದು ವೇವ್ ರೀತಿ ಸೋಂಕಿತರ ಸಂಖ್ಯೆ ಏರಿಕೆಯಾಗಿತ್ತು. ಗ್ರೀನ್ ಝೋನ್‌ನಲ್ಲಿದ್ದ ಉಡುಪಿಯಲ್ಲಿ ಒಂದೇ ದಿನ ನೂರು ಪ್ರಕರಣ ದಾಖಲಾಗಿದ್ದು, ಕಲಬುರಗಿಯಲ್ಲಿ 90 ಪ್ರಕರಣ ಕಾಣಿಸಿಕೊಂಡಿದ್ದು, ಯಾದಗಿರಿ ಸೋಂಕಿತರ ಪಟ್ಟಿಯಲ್ಲಿ ಟಾಪ್ 5 ಜಿಲ್ಲೆಯ ಸ್ಥಾನ ಪಡೆದಿದ್ದು, ಅಂತಾರಾಜ್ಯ ಅದರಲ್ಲೂ ಮುಂಬೈನಿಂದ ಆಗಮಿಸಿದವರದ್ದು. ಈ ಪ್ರಕರಣಗಳೆಲ್ಲ ಕ್ವಾರಂಟೈನ್ ಕೇಂದ್ರದಲ್ಲಿ ಕಾಣಿಸಿಕೊಂಡಿದ್ದರಿಂದ ಇದು ಬೇರೆಯವರಿಗೆ ಹಬ್ಬಲಿಲ್ಲ. ಆದರೀಗ ಬೆಂಗಳೂರಿನಲ್ಲಿ ಹಬ್ಬುತ್ತಿರುವುದು ಈ ರೀತಿಯ ಟ್ರಾವೆಲ್ ಹಿಸ್ಟರಿಯಿಂದಲ್ಲ. ಬದಲಿಗೆ ಅನ್‌ಲಾಕ್ ಆದ ಬಳಿಕ ಜನ ಹೊರಗಡೆ ಬಂದ ಪರಿಣಾಮ ಆಗುತ್ತಿರುವ ಸಮಸ್ಯೆ. ಆದ್ದರಿಂದಲೇ ಇತ್ತೀಚಿನ ದಿನದಲ್ಲಿ ರಾಜ್ಯ ಸರಕಾರ ಬಿಡುಗಡೆಗೊಳಿಸುತ್ತಿರುವ ಹೆಲ್ತ್ ಬುಲೆಟಿನ್‌ನಲ್ಲಿ ಸೋಂಕಿನ ಕಾರಣವನ್ನೇ ನೀಡುತ್ತಿಲ್ಲ!

ಹಾಗೇ ನೋಡಿದರೆ ಕರೋನಾ ನಿಯಂತ್ರಣದಲ್ಲಿದ್ದ ಕರ್ನಾಟಕದಲ್ಲಿ ಎಗ್ಗಿಲ್ಲದೇ ಸೋಂಕು ಪಸರಿಸುತ್ತಿರುವುದಕ್ಕೆ ಸರಕಾರದಷ್ಟೇ ಜವಾಬ್ದಾರಿಯನ್ನು ನಾಗರಿಕನೂ ಹೊರಬೇಕು. ಸರಕಾರ ಕರೋನಾ ವಿಷಯದಲ್ಲಿ ತೆಗೆದುಕೊಂಡ ಹಲವು ಎಡವಟ್ಟಿನ ನಿರ್ಧಾರಗಳು ಇಂದಿನ ಈ ಪರಿಸ್ಥಿತಿ ಕಾರಣ ಎನ್ನುವುದು ಎಷ್ಟು ಸತ್ಯವೋ, ಜನರ ಅಸಡ್ಡೆಯೂ ಇಂದಿನ ಕರೋನಾಘಾತಕ್ಕೆ ಕಾರಣ ಎನ್ನುವುದನ್ನು ಮರೆಯುವಂತಿಲ್ಲ. ಸರಕಾರ ವಿಫಲತೆಗಳ ಬಗ್ಗೆ ಮಾತನಾಡುವ ಮೊದಲು ಜನರು ಮಾಡಿದ ಸಮಸ್ಯೆಯನ್ನು ನೋಡಬೇಕಿದೆ.

ರಾಜ್ಯದಲ್ಲಿ ಲಾಕ್‌ಡೌನ್ ಹಂತಹಂತವಾಗಿ ತೆರವು ಮಾಡಲು ಸರಕಾರ ಸಿದ್ಧವಾಗುತ್ತಿದ್ದಂತೆ, ಅದಕ್ಕೂ ಮೊದಲೇ ರಾಜ್ಯದ ಜನರು ಮನೆಯಿಂದಾಚೆ ಹೋಗಬೇಕು ಎನ್ನುವ ರೀತಿಯಲ್ಲಿದ್ದರು. ಅದರಲ್ಲೂ ಬೆಂಗಳೂರಿನ ಮಂದಿ, ಒಂದು ತುದಿಯಿಂದ ಇನ್ನೊಂದು ತುದಿಗೆ ಹೋಗದಿದ್ದರೆ ನಮ್ಮ ಜೀವವೇ ಹೋಗುತ್ತದೆ ಎನ್ನುವ ರೀತಿ ವರ್ತಿಸಿದರು. ಈ ರೀತಿ ಮನೆಯಿಂದ ಆಚೆ ಬೀಳಬೇಕು ಎಂದಿದ್ದು, ಕೆಲಸವಿಲ್ಲದೇ, ಕೂಲಿಯಿಲ್ಲದೇ ಸಂಕಷ್ಟಕ್ಕೆ ಸಿಲುಕಿದ ಕೂಲಿ ಕಾರ್ಮಿಕರೋ ಅಥವಾ ಬಾಡಿಗೆ ಸಿಗದೇ ಲೋನ್ ಕಟ್ಟಲು ಆಗದ ಆಟೋ ಚಾಲಕನಲ್ಲ. ಬದಲಿಗೆ ಸೋ ಕಾಲ್ಡ್ ಸುಶಿಕ್ಷಿತ ವರ್ಗ. ಈ ರೀತಿ ಒಂದು ಏರಿಯಾದಿಂದ ಇನ್ನೊಂದು ಏರಿಯಾಗೆ ಹೋಗುವುದರೊಂದಿಗೆ, ಬೀದಿಯಲ್ಲಿ ನಿಂತು ತಿನ್ನುವುದು, ಸಾಮಾಜಿಕ ಅಂತರವೆಂದರೆ ಅರ್ಥವೇನು ಎನ್ನುವ ರೀತಿಯಲ್ಲಿ ವರ್ತಿಸುವುದರಿಂದ ತಮಗೂ ಸೋಂಕು ತಗುಲಿಸಿಕೊಂಡು, ತಮಗೆ ಸಿಗುತ್ತಿದ್ದ ಜನರಿಗೂ ಸೋಂಕು ಹಬ್ಬಿಸುವ ಕೆಲಸವನ್ನು ಮಾಡುತ್ತಾ ಹೋದರು. ಇದರ ಪರಿಣಾಮವಾಗಿಯೇ ಬೆಂಗಳೂರು ಒಂದರಲ್ಲೇ ಜೂನ್ 26ರಂದು 596 ಹಾಗೂ 27ರಂದು 783 ಸೋಂಕಿತರು ಕಾಣಿಸಿಕೊಂಡರು. ಓಡಾಟ ಶೇ.50ರಷ್ಟು ಮಂದಿಗೆ ಅನಿವಾರ್ಯವಾಗಿತ್ತಾದರೂ, ಇನ್ನು 50ರಷ್ಟು ಮಂದಿ ಅನಗತ್ಯ ಓಡಾಟಕ್ಕೆ ಮುಂದಾದರು ಎನ್ನುವುದನ್ನು ಒಪ್ಪಬೇಕು.

ಈಗಾಗಲೇ ಫೆಬ್ರವರಿಯಿಂದ ಅವಿರತವಾಗಿ ದುಡಿಯುತ್ತಿರುವ ವೈದ್ಯರಿಗೆ ಹಾಗೂ ಆಸ್ಪತ್ರೆಯ ಸಿಬ್ಬಂದಿಗಳು ಈ ವೇಳೆಗೆ ಬೆಂಡಾಗಿದ್ದಾರೆ. ಅವರಿಗೆ ಬೇರೆಯವರ ಆರೋಗ್ಯದೊಂದಿಗೆ ತಮ್ಮ ಆರೋಗ್ಯ ನೋಡಿಕೊಳ್ಳುವುದು ದುಸ್ತರವಾಗುತ್ತಾ ಸಾಗಿದೆ. ಆದ್ದರಿಂದಲೇ ಕಳೆದೊಂದು ವಾರದಿಂದ ಸೋಂಕಿತರ ಸಾವಿನ ಸಂಖ್ಯೆಯಲ್ಲಿಯೂ ದೊಡ್ಡ ಪ್ರಮಾಣದ ಏರಿಕೆಯಾಗಿರುವುದು. ಆದರೆ ಇದ್ಯಾವುದನ್ನು ಲೆಕ್ಕಿಸದ ಜನರು ಮಾತ್ರ, ‘ನಾನು ಸುರಕ್ಷಿತ. ನನಗೆ ಕರೋನಾ ಬರಲ್ಲ’ ಎನ್ನುವ ಭ್ರಮಲೋಕದಲ್ಲಿ ಮನೆಯಿಂದ ಆಚೆಗೆ ಬರುತ್ತಿದ್ದಾರೆ. ಬರುವವರು ಬರುತ್ತಾರೆ, ಸರಿಯಾಗಿ ಮಾಸ್ಕ್ ಧರಿಸಿಕೊಂಡು, ಸಾಮಾಜಿಕ ಅಂತರವನ್ನು ಪಾಲಿಸುತ್ತಾರೆಯೇ ಎನ್ನುವುದನ್ನು ನೋಡುವುದಾದರೆ ಅದ್ಯಾವುದು ಇಲ್ಲ. ‘ಎಲ್ಲರೊಳಗಾಗಿ ಇರುತ್ತೇವೆ’ ಎನ್ನುವ ರೀತಿ ವರ್ತಿಸುತ್ತಿದ್ದಾರೆ.

ಜನರ ಪರಿಸ್ಥಿತಿ ಇದಾದರೆ, ಸರಕಾರದ ಎಡವಟ್ಟು ಒಂದೆರೆಡಲ್ಲ. ಆರ್ಥಿಕತೆಯನ್ನು ಉಳಿಸಿಕೊಳ್ಳುವ ಭರದಲ್ಲಿ ರಾಜ್ಯ ಸರಕಾರ ಲಾಕ್‌ಡೌನ್ ಅನ್ನು ಏನೋ ಅನ್‌ಲಾಕ್ ಮಾಡಿತ್ತು. ಆದರೆ ಇದನ್ನು ಮಾಡುವ ಮೊದಲು, ನಮ್ಮ ಜನರ ಮನಸ್ಥಿತಿಯನ್ನು ಅರಿಯುವಲ್ಲಿ ಸಂಪೂರ್ಣ ವಿಫಲವಾಯಿತು. ಅಗತ್ಯ ಕ್ಷೇತ್ರ ಆರಂಭಿಸುವುದಕ್ಕೆ ಅವಕಾಶ ನೀಡಿದ್ದನ್ನು ಒಪ್ಪಬಹುದು. ಆದರೆ ಅಗತ್ಯವಲ್ಲದ ಕ್ಷೇತ್ರಗಳಿಗೂ ಅವಕಾಶ ನೀಡಿತ್ತು. ಖಾಸಗಿ ಸಂಸ್ಥೆಗಳಿಗೆ ಕಚೇರಿ ಆರಂಭಿಸಲು, ಮಾಲ್‌ಗಳನ್ನು ತೆರೆಯುವ ಅವಕಾಶವನ್ನು ಸರಕಾರ ನೀಡಿತ್ತು. ಆದರೆ ಕಚೇರಿಗೆ ಅವಕಾಶ ನೀಡುತ್ತಿದ್ದಂತೆ, ಬಹುತೇಕ ಸಂಸ್ಥೆಗಳು, ವರ್ಕ್ ಫ್ರಂ ಹೋಂಗೆ ಅವಕಾಶವಿದ್ದರೂ ಅದನ್ನು ತೆಗೆಯಲು ಮುಂದಾದರು. ಇದರಿಂದಲೂ ಕರೋನಾ ಸುಲಭವಾಗಿ ಒಬ್ಬರಿಂದ ಇಬ್ಬರಿಗೆ, ಇಬ್ಬರಿಂದ ನಾಲ್ವರಿಗೆ ಹಬ್ಬಲು ಸಾಧ್ಯವಾಯಿತು. ಇದೆಲ್ಲದರೊಂದಿಗೆ ಲಾಕ್‌ಡೌನ್ ಆಗುವುದಿಲ್ಲ ಎಂದು ಸರಕಾರ ಹೇಳುತ್ತಿದೆ. ಸರಿ ಅದನ್ನು ಒಪ್ಪೋಣ. ಆದರೆ ಸೀಲ್‌ಡೌನ್ ನಿಯಮಗಳನ್ನು ಸಡಲಿಕೆ ಮಾಡುತ್ತಾ ಸಾಗಿದ್ದೇ ಈ ಅವಾಂತರಕ್ಕೆ ಕಾರಣವಾಗಿದೆ. ಮೊದಲೆಲ್ಲ ಸೋಂಕಿತರ ಮನೆಯ ಒಂದು ಕಿಮೀ ದೂರ ಸೀಲ್‌ಡೌನ್ ಪ್ರದೇಶವೆಂದು ಘೋಷಣೆ ಮಾಡುತ್ತಿದ್ದರು. ಆದರೀಗ ಈ ಮಾರ್ಗಸೂಚಿ 10 ಮೀಟರ್‌ಗೂ ಪಾಲನೆಯಾಗುತ್ತಿಲ್ಲ. ಇನ್ನು ಅಪಾರ್ಟ್‌ಮೆಂಟ್‌ನಲ್ಲಿ ಏನಾದರೂ ಕಾಣಿಸಿಕೊಂಡರೆ, ಆ ಮಹಡಿಯನ್ನು ಮಾತ್ರ ಸೀಲ್‌ಡೌನ್ ಎಂದು ಪರಿಗಣಿಸುತ್ತಾರಂತೆ. ಇದೇ ರೀತಿ ಮುಂದುವರಿದರೆ, ಮುಂದೊಂದು ಕರೋನಾ ಸೋಂಕಿತನ ಬೆಡ್‌ರೂಂ ಮಾತ್ರ ಸೀಲ್‌ಡೌನ್ ಎನ್ನುವ ಕಾನೂನು ಜಾರಿಗೆ ತಂದರೂ ಅಚ್ಚರಿಯಿಲ್ಲ. ಇದರೊಂದಿಗೆ ಶಿಕ್ಷಣ ಇಲಾಖೆ (ಸಚಿವರು) ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಪ್ರತಿಷ್ಠೆಯನ್ನಾಗಿ ತೆಗೆದುಕೊಂಡು ನಡೆಸಲು ಮುಂದಾಗಿದ್ದು, ಸಹ ಸರ್ವಸಮ್ಮತ ನಿರ್ಧಾರ ಎನ್ನಲು ಸಾಧ್ಯವಿಲ್ಲ. ಎರಡು ಪರೀಕ್ಷೆ ಮುಗಿಸುವ ವೇಳೆಗೆ ಇಬ್ಬರು ವಿದ್ಯಾರ್ಥಿಗಳಿಗೆ ಕರೋನಾ ಬಂದಿರುವುದು ದೃಢಪಟ್ಟಿದೆ. ಸೋಂಕು ತಗುಲಿದ ವಿದ್ಯಾರ್ಥಿಗಳು ಒಂದೆಡೆಯಾದರೆ, ಅವರೊಂದಿಗೆ ಒಂದೇ ಕೋಣೆಯಲ್ಲಿ ಕೂತು ಪರೀಕ್ಷೆ ಬರೆದ ವಿದ್ಯಾರ್ಥಿಗಳು ಮಾನಸಿಕವಾಗಿ ಎಷ್ಟು ಒತ್ತಡಕ್ಕೆ ಸಿಲುಕಿರುವುದಿಲ್ಲ ಎನ್ನುವುದನ್ನು ಯೋಚಿಸಬೇಕು. ಅವರೊಂದಿಗೆ ಪರೀಕ್ಷೆ ಬರೆದ ವಿದ್ಯಾರ್ಥಿಗಳಿಗೆ ಕರೋನಾ ಸೋಂಕು ಹಬ್ಬದಿದ್ದರೂ, ಅವರು ಮಾನಸಿಕವಾಗಿ ಎಷ್ಟು ಕುಗ್ಗುತ್ತಾರೆ ಎನ್ನುವುದನ್ನು ಯೋಚಿಸಬೇಕಿದೆ. ಅಷ್ಟಕ್ಕೂ ಇದೇ ತಿಂಗಳು ಪರೀಕ್ಷೆ ನಡೆಸಬೇಕು ಎನ್ನುವ ಹಠವೇಕೆ ಎನ್ನುವುದು ಯಕ್ಷಪ್ರಶ್ನೆ. ಸೆಪ್ಟೆಂಬರ್ ತನಕ ಕಾಲೇಜು ಆರಂಭವಾಗುವುದಿಲ್ಲ ಎನ್ನುವ ನಿರ್ಧಾರವಾಗಿರುವುದರಿಂದ, ಇನ್ನೊಂದು ತಿಂಗಳು ನೋಡಿಕೊಂಡು ಪರೀಕ್ಷೆ ನಡೆಸಬಹುದಾಗಿತ್ತು ಅಲ್ಲವೇ?

ಇದೀಗ ರಾಜ್ಯ ಸರಕಾರ, ಜನರು ಮಾಡಿರುವ ಎಲ್ಲ ಎಡವಟ್ಟನ್ನು ಸರಿಪಡಿಸಬೇಕು ಎಂದರೆ ಮತ್ತೊಂದು ಲಾಕ್‌ಡೌನ್ ಅಗತ್ಯವಿದೆ. ಲಾಕ್‌ಡೌನ್ ಮಾಡುವುದರಿಂದ ಆರ್ಥಿಕವಾಗಿ ರಾಜ್ಯದ ಮೇಲೆ ಭಾರಿ ಹೊಡೆತ ಬೀಳುತ್ತದೆ ಎಂದರೂ, ಅದನ್ನು ಬಿಟ್ಟು ಸರಕಾರದ ಮುಂದೆ ಇನ್ಯಾವ ದಾರಿಗಳು ಸದ್ಯಕ್ಕೆ ಕಾಣುತ್ತಿಲ್ಲ. ಲಸಿಕೆ ತಯಾರಾಗಿ ಜನರಿಗೆ ತಲುಪುವ ತನಕ ಸೋಂಕಿನಿಂದ ರಕ್ಷಿಸಲು ಲಾಕ್‌ಡೌನ್‌ನಿಂದ ಮಾತ್ರ ಸಾಧ್ಯ. ಆದ್ದರಿಂದ ಸರಕಾರದ ಮುಂದೆ ಅದನ್ನು ಬಿಟ್ಟರೆ ಇನ್ಯಾವ ದಾರಿಗಳು ಇಲ್ಲ. ಕೆಲವರು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮುಗಿದ ಬಳಿಕ ಲಾಕ್‌ಡೌನ್ ಮಾಡುತ್ತಾರೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಆದರೆ ಒಂದು ವೇಳೆ ಸರಕಾರ ಈ ರೀತಿಯ ನಿರ್ಧಾರ ತೆಗೆದುಕೊಂಡರೆ, ‘ಕೊಳ್ಳೆ ಹೊಡೆದ ಮೇಲೆ ಕೋಟೆ ಬಾಗಿಲು’ ಹಾಕಿದಂತಾಗುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ.

ಆದ್ದರಿಂದ ಇಂದಿನ ಪರಿಸ್ಥಿತಿಯಲ್ಲಿ ಸರಕಾರದ ಮುಂದಿರುವ ದಾರಿ ಲಾಕ್‌ಡೌನ್ ಒಂದೇ ಎನ್ನುವುದನ್ನು ನಾವು ಒಪ್ಪಬೇಕು. ಈ ಲಾಕ್‌ಡೌನ್‌ನಿಂದ ಸಂಪೂರ್ಣ ಸಮಸ್ಯೆ ಬಗೆಹರಿಯುತ್ತದೆ ಎನ್ನುವುದನ್ನು ನಾನು ಒಪ್ಪುವುದಿಲ್ಲ. ಆದರೆ ಇನ್ನೊಂದು ಹಂತದ ಕಠಿಣ ಲಾಕ್‌ಡೌನ್‌ನಿಂದ ಕರೋನಾ ಚೈನ್ ಲಿಂಕ್ ಅನ್ನು ಖಂಡಿತವಾಗಿ ಕತ್ತರಿಸಬಹುದು. ಈ ಕೊಂಡಿ ತಪ್ಪಿಸಿದರೆ, ಅರ್ಧ ಸಮಸ್ಯೆ ಬಗೆಹರೆಯುತ್ತದೆ. ಸರಕಾರ ಈ ಕೆಲಸವನ್ನು ಮಾಡಬೇಕು. ಲಾಕ್‌ಡೌನ್ ಹೇರಬೇಕು ಎನ್ನುವುದು ಸತ್ಯ. ಆದರೆ ಇದನ್ನು ಸರಕಾರ ಮಾಡುವ ತನಕ ಜನರೇಕೆ ಕಾಯಬೇಕು. ಕರೋನಾ ಸಂಕಷ್ಟದಿಂದ ಪಾರಾಗಲು ಸಾಧ್ಯವಾದಷ್ಟು ಮನೆಯಲ್ಲಿಯೇ ಇರಬಹುದಲ್ಲವೇ? ಸರಕಾರ ಲಾಕ್‌ಡೌನ್ ಘೋಷಿಸಿ, ಪೊಲೀಸರು ಲಾಠಿ ಹಿಡಿದು ಬೀದಿ ಬೀದಿಯಲ್ಲಿ ನಿಂತರೆ ಮಾತ್ರ ನಾವು ಮನೆಯಿಂದ ಹೊರಬರುವುದಿಲ್ಲ ಎನ್ನುವ ಮೊಂಡತನವೇಕೆ? ನಿಮ್ಮ ಜೀವಕ್ಕೆ ನೀವೇ ಹೊಣೆ ಎನ್ನುವ ಪರೋಕ್ಷ ಸಂದೇಶವನ್ನು ಆಡಳಿತ ಮಾಡುವವರು ನೀಡುತ್ತಿರುವುದು ತಿಳಿದ ಬಳಿಕವೂ, ಅನವಶ್ಯಕವಾಗಿ ಮನೆಯಿಂದ ಓಡಾಡುವುದಾದರೂ ಏಕೆ? ಅದರಲ್ಲೂ ಬೆಂಗಳೂರಿನಲ್ಲಿ ಜನ ಕರೋನಾವನ್ನು ಮರೆತು ಓಡಾಡುತ್ತಿದ್ದಾರೆ ಎನ್ನುವುದರಲ್ಲಿ ಅನುಮಾನವಿಲ್ಲ. ಆದ್ದರಿಂದ ಸರಕಾರ ಲಾಕ್‌ಡೌನ್ ತೆಗೆದುಕೊಳ್ಳುವುದೋ ಬಿಡುವುದೋ ಎನ್ನುವ ಮೊದಲು, ಸ್ವಯಂ ಲಾಕ್‌ಡೌನ್ ಮಾಡಿಕೊಂಡು ನಿಮ್ಮ ಹಾಗೂ ನಿಮ್ಮ ಮನೆಯವರ ಆರೋಗ್ಯವನ್ನಾದರೂ ಕಾಪಾಡಿಕೊಳ್ಳಬಹುದಲ್ಲವೇ?

ಪವಿತ್ರವಾದ ವೈದ್ಯಕೀಯ ಸೇವೆ ಇಂದು ಎತ್ತಸಾಗುತ್ತಿದೆ?

ಅಭಿವ್ಯಕ್ತಿ

ಡಾ.ಕರವೀರಪ್ರಭು ಕ್ಯಾಲಕೊಂಡ
drkvkyalakond@gmail.com

ವೈದ್ಯಕೀಯ ವೃತ್ತಿ ಈಗ ಕವಲುದಾರಿಯಲ್ಲಿ ನಿಂತಿವೆ. ವೈದ್ಯ- ರೋಗಿಗಳ ಸಂಬಂಧ ಹಳಸಿದೆ. ವಿಶ್ವಾಸ, ನಂಬಿಕೆ ನೆಲ ಕಚ್ಚಿದೆ. ಜನರ ನಿರೀಕ್ಷೆಗಳು ಗಗನಕ್ಕೇರಿವೆ. ಸಮಾಜದಲ್ಲಿನ ಸಹನೆ, ಸಂಯಮ, ಶಕ್ತಿ, ಭಾರತೀಯ ಜನಮಾನಸಗಳಿಂದ ಮಾಯವಾಗಿವೆ. ಸರಕಾರಿ ಆಸ್ಪತ್ರೆಗಳಲ್ಲಿನ ವೈದ್ಯರ ಕೊರತೆ, ಔಷಧ, ಸಲಕರಣೆ, ಪರಿಕರಗಳ ಕೊರತೆ...ಖಾಸಗಿ ಆಸ್ಪತ್ರೆಗಳ ಮೇಲೆ ಒತ್ತಡ ಹೆಚ್ಚಾಗಿವೆ. ಇವೆಲ್ಲ ಗೊಂದಲ, ಗೌಜುಗಳು ವೈದ್ಯರ ಮೇಲಿನ ಹಲ್ಲೆಗೆ ನಾಂದಿ ಹಾಡಿವೆ.

ಇಂದಿನ ಕಾಲಘಟ್ಟದಲ್ಲಿ ವೈದ್ಯ ವೃತ್ತಿಯು ಗೊಂದಲದಲ್ಲಿ ಮತ್ತು ದ್ವಂದ್ವದಲ್ಲಿ ಬಂದು ನಿಂತಿದೆ. ಪ್ರಸ್ತುತ ನಮ್ಮ ಸುತ್ತಮುತ್ತಲೂ ವೈದ್ಯರ ಮೇಲೆ ನಡೆಯುವ ದಾಳಿ, ಆಸ್ಪತ್ರೆಯ ಮೇಲೆ ನಡೆಯುವ ಗೂಂಡಾಗಿರಿ ಕಂಡಾಗ ಪ್ರತಿಯೊಬ್ಬ ಹೆತ್ತವರೂ ನನ್ನ ಮಗ ವೈದ್ಯನಾಗಬೇಕೇ? ಎಂದು ತಮ್ಮನ್ನೇ ತಾವು ಕೇಳಿಕೊಳ್ಳುವ ಪರಿಸ್ಥಿತಿ ಬಂದಿದೆ. ಇತ್ತೀಚೆಗೆ ಜಾಗತಿಕ ಆರೋಗ್ಯ ಸಂಸ್ಥೆ ಬಿಡುಗಡೆ ಮಾಡಿದ ವರದಿಯ ಪ್ರಕಾರ ಭಾರತದಲ್ಲಿ ವೈದ್ಯ ಮತ್ತು ಜನಸಂಖ್ಯೆಯ ಅನುಪಾತ ಹೀಗಿದೆ. ಸಾವಿರ ಜನಸಂಖ್ಯೆಗೆ ವೈದ್ಯರ ಅನುಪಾತ 0.7, ಚೀನಾದಲ್ಲಿ 1.7, ಅಮೆರಿಕದಲ್ಲಿ 2.5, ಬ್ರಿಟನ್‌ನಲ್ಲಿ 2.8, ಸ್ಪೇನ್‌ನಲ್ಲಿ 4.9. ಹೀಗಿರುವಾಗ, ಒಬ್ಬ ವೈದ್ಯನನ್ನು ದೇವರಾಗಿ ಕಾಣುವುದು ಬಿಡಿ, ಕೇವಲ ಮನುಷ್ಯನಾಗಿ ನೋಡಿದರೂ ತನ್ನ ಇತಿಮಿತಿಯೊಳಗೆ ಆತ ಬಹಳ ರೋಗಿಗಳಿಗೆ ಚಿಕಿತ್ಸೆ ನೀಡಬೇಕಾದ ಕಠಿಣ ಪರಿಸ್ಥಿತಿ ಇದೆ. ಹೀಗಿರುವಾಗ , ವೈದ್ಯರ ಮೇಲೆ ಆಕ್ರಮಣ, ಆಸ್ಪತ್ರೆಯ ಮೇಲೆ ದಾಳಿ , ದೌರ್ಜನ್ಯ ಮಾಡುವುದು ಎಷ್ಟು ಸರಿ? ಬದಲಿಗೆ ರೋಗಿಯ ಸಂಬಂಧಿಕರು ವಾಸ್ತವವನ್ನು ಅರಿತು ತಾಳ್ಮೆಯಿಂದ ವೈದ್ಯರೂ ಎಂದು ಎಂದು ವರ್ತಿಸಿದಲ್ಲಿ ಮಾತ್ರ ಸಮಾಜದಲ್ಲಿ ವೈದ್ಯರು ತಮ್ಮ ವೃತ್ತಿಗೆ ನ್ಯಾಯ ಒದಗಿಸಲು ಸಾಧ್ಯ. ವೈದ್ಯರ ಮೇಲಿನ ಹಲ್ಲೆಗೆ ಕಾರಣ ಹಲವು. ಪ್ರತಿ ಘಟನೆಯ ಹಿಂದೆಯೂ ಒಂದೊಂದು ಕಾರಣ. ಇಂಥದ್ದೇ ನಿಖರವಾದ ಕಾರಣವೆಂದು ನಿಶ್ಚಿತವಾಗಿ ಹೇಳಲು ಬರುವುದಿಲ್ಲ. ಕೆದಕಿದಷ್ಟೂ ಆಳ, ಅಗಲ ಹೆಚ್ಚುವುದು.

ಗ್ರಾಹಕರ ರಕ್ಷಣಾ ಕಾನೂನು: ಗ್ರಾಹಕರ ರಕ್ಷಣಾ ಕಾನೂನು (CPA)ನನ್ನು ಸರಕಾರ ಜಾರಿಗೆ ತಂದಾಗಲೇ ವೈದ್ಯವೃತ್ತಿಯಲ್ಲಿಯ ಸೇವಾ ಮನೋಭಾವ ನೇಪಥ್ಯಕ್ಕೆ ಸರಿಯಿತು. ಉದ್ದಿಮೆಯಾಗಿ ಬೆಳೆಯಿತು. ವೈದ್ಯ ತನ್ನ ಮತ್ತು ತನ್ನವೃತ್ತಿ ರಕ್ಷಣೆಗಾಗಿ ಎವಿಡೆನ್ಸ್ ಬೇಸ್ಡ್ ಪ್ರಾಕ್ಟೀಸ್ ಪ್ರಾರಂಭಿಸಿದ. ಅದು ಜನರಿಗೆ ವಿಚಿತ್ರವಾಗಿ ಕಾಣಿಸಿತು. ಅವರು ಬರೆಯುವ ಇನ್‌ವೆಸ್ಟಿಗೇಷನ್ಸ್‌ಗೆ ಹಣ ಸುಲಿಗೆಯ ಹೊಸ ರೂಪ ಎಂಬ ಆರೋಪ ಬಂತು. ಗ್ರಾಹಕರ ರಕ್ಷಣಾ ಕಾನೂನು ಜಾರಿಗೆ ಬಂದಾಗ ಅವೆಲ್ಲಾ ಅವಶ್ಯವಾಗಿದ್ದವು ವಿನಃ ಅನಾವಶ್ಯಕವಾಗಿರಲಿಲ್ಲ. ಸರಕಾರ CPA ಕಾನೂನು ಜಾರಿಗೆ ತರುವಾಗ, ತಂದ ಮೇಲೆ ಜನರಿಗೆ ತಿಳಿವಳಿಕೆ ಮಾಡಿ ಕೊಡುವ ಪ್ರಯತ್ನ ಮಾಡಲಿಲ್ಲ.

ಹೀಗಾಗಿ ವೈದ್ಯ ರೋಗಿಯ ನಡುವಿನ ಸಂಬಂಧದ ಬಿರುದು ದೊಡ್ಡದಾಯಿತು. ಕಂದಕವಾಯಿತು. ಕಾದಾಟಕ್ಕೆ ಕಾರಣವಾಯಿತು. ಮಾಧ್ಯಮಗಳು ಹೊತ್ತಿದ ಬೆಂಕಿಗೆ ತುಪ್ಪ ಸುರಿದವು. ನಮ್ಮನ್ನಾಳುವ ಪ್ರತಿನಿಧಿಗಳು ತಮ್ಮ ಬೇಳೆ ಬೇಯಿಸಿಕೊಳ್ಳಲು ವೈದ್ಯರ ಹಲ್ಲೆಗೆ ಕುಮ್ಮಕ್ಕು ಕೊಟ್ಟರು. ಇಂಥವರು ನಾಡ ನಾಯಕರಿಗೆ ಕೆಟ್ಟವರಾಗಿ ಕಾಣಲಿಲ್ಲ, ಬದಲಾಗಿ ಅವರಿಗೆ ಮಂತ್ರಿಗಿರಿ ಸಿಕ್ಕು, ಸಿಕ್ಕಾಪಟ್ಟೆ ಮಾತನಾಡಿದರು. ಇಂಥ ದ್ವಂದ್ವಗಳು, ಗೊಂದಲಗಳ ಚಕ್ರವ್ಯೂಹದಲ್ಲಿ ವೈದ್ಯ ಬಲಿಪಶು ಆಗುತ್ತಿರುವುದು ದೊಡ್ಡ ದುರಂತ!

CPAಯಲ್ಲಿ ಏನಿದೆ ಎಂಬುದು ಜನರಿಗೆ ಗೊತ್ತಿರಲಿಲ್ಲ. ಜನಪ್ರತಿನಿಧಿಗಳು ಅಂಗೈಯಲ್ಲಿ ಅರಮನೆ ತೋರಿಸಿದರು. ಜನ ಬೆಂಬಲ ಪಡೆದರು. ವೈದ್ಯ ವೃತ್ತಿಯನ್ನು C.P.A-. ಒಳಗಡೆ ತಂದರು. ವೈದ್ಯರು ಸೇವಾವೃತ್ತಿಗೆ ವಿದಾಯ ಹೇಳಿದರು. ಬದಲಾವಣೆ ಅನಿವಾರ್ಯವಾಯಿತು. ಬದಲಾದರು. ಜನರಿಗೆ ಆರೋಗ್ಯ ರಕ್ಷಣೆ ಹೊರೆಯಾಯಿತು. ಇದಕ್ಕೆ ವೈದ್ಯರು ಕಾರಣರಲ್ಲ. ನಮ್ಮನ್ನಾಳುವ ಪ್ರತಿನಿಧಿಗಳು, ಸರಕಾರ ಕಾರಣ ಎಂಬುದನ್ನು ಸಾರ್ವಜನಿಕರು ಅರಿಯಬೇಕು.

ವೈದ್ಯರ ಮೇಲಿನ ಹಲ್ಲೆಗೆ ಕಾರಣಗಳು: ಪಶ್ಚಿಮ ಬಂಗಾಳದ ಆಸ್ಪತ್ರೆಯೊಂದರ ವೈದ್ಯರ ಮೇಲೆ ರೋಗಿಯ ಕಡೆಯವರು ಮರಣಾಂತಿಕ ಹಲ್ಲೆ ನಡೆಸಿದರು. ಅದರ ವಿರುದ್ಧ ಹುಟ್ಟಿಕೊಂಡ ಪ್ರತಿಭಟನೆ ಇಡೀ ದೇಶವ್ಯಾಪಿ ಹರಡಿತು. ಈ ವೈದ್ಯರ ಪ್ರತಿಭಟನೆಯಲ್ಲಿ ಸಹಜವಾಗಿಯೇ ರಾಜಕೀಯ ಪ್ರವೇಶ ಪಡೆಯಿತು. ವೈದ್ಯರ ಮೇಲೆ ಹಲ್ಲೆಗಳು ಕಳೆದ ದಶಕದಿಂದ ನಡೆಯುತ್ತ ಬಂದಿವೆ. ಇನ್ನೂ ನಡೆಯುತ್ತಲೇ ಇವೆ. ವೈದ್ಯ ಮತ್ತು ರೋಗಿಗಳ ನಡುವಿನ ಸಂಬಂಧ ನಶಿಸಿರುವುದೇ ಇಂಥ ಘಟನೆಗೆ ಕಾರಣ ಎನ್ನವುದಾದರೆ, ಅದನ್ನು ಪುನಃ ಗಟ್ಟಿಗೊಳಿಸುವುದು ಹೇಗೆ? ಹಲ್ಲೆಗಳಿಂದಲೇ ಈ ಸಮಸ್ಯೆ ಬಗೆಹರಿಸಬಹುದೆಂಬುದು ಸಾರ್ವಜನಿಕರ ತಪ್ಪು ತಿಳಿವಳಿಕೆಯೇ ಇಂಥ ಘಟನೆಗಳಿಗೆ ಕಾರಣ ಎನ್ನುವುದಾದಲ್ಲಿ, ಅದನ್ನು ಕಿತ್ತು ಹಾಕುವುದು ಹೇಗೆ? ದುಬಾರಿಯಾಗಿರುವ ವೈದ್ಯಕೀಯ ಸೇವೆಗಳೇ ಇವುಗಳಿಗೆ ಮೂಲ ಕಾರಣವೆಂದಾದರೆ, ಅದನ್ನು ಕಡಿಮೆ ಮಾಡಲು ಸಾಧ್ಯವೇ?

ವೈದ್ಯಕೀಯ ಸೇವೆಯ ಬೆಲೆ ನಿಗದಿಯಾಗುವುದು ಉತ್ಪಾದನೆಗೆ ತಗಲುವ ವೆಚ್ಚದ ಮೇಲೆ ಅವಲಂಬಿತವಾಗಿರುತ್ತದೆ. ವೈದ್ಯಕೀಯ ಶಿಕ್ಷಣ ಅತ್ಯಂತ ದುಬಾರಿಯಾಗಿದೆ. ಅದು ದೀರ್ಘಕಾಲಿಕವೂ ಹೌದು. ಆರು ವರ್ಷದ ವೈದ್ಯಕೀಯ ಪದವಿ ಮುಗಿಸುವುದರೊಳಗೆ ಪಾಲಕರು ಹೈರಾಣಾಗಿ ಬಿಟ್ಟಿರುತ್ತಾರೆ. ಒಂದೇ ಪ್ರಯತ್ನದಲ್ಲಿ ಎಲ್ಲಾ ಪರೀಕ್ಷೆಗಳನ್ನು ಪಾಸಾದರೆ.., ಹಾಗಾಗುವುದು ಕಷ್ಟ ಸಾಧ್ಯ. ಸರಕಾರಿ ಸೀಟು ಪಡೆದು, ಸರಕಾರಿ ಕಾಲೇಜಿನಿಂದ ಪಾಸಾಗಬೇಕಾದರೆ, ಈಗಿನ ಕಾಲದಲ್ಲಿ ತಗಲುವ ವೆಚ್ಚ ಸುಮಾರು ಅರ್ಧ ಕೋಟಿ. ಖಾಸಗಿ ಕಾಲೇಜಾದರೆ ಅದು ಒಂದು ಕೋಟಿಯಾಗಬಹುದು. ಬ್ಯಾಂಕ್ ಸಾಲ ಮಾಡದೇ ಕಲಿಯುವುದು ಕಷ್ಟ. ವೈದ್ಯಕೀಯ ವಿದ್ಯಾರ್ಥಿ ಪದವಿ ಮುಗಿಸುವ ಹೊತ್ತಿಗೆ ಅವನ ಶಾಲಾ ಸಹಪಾಟಿಗಳು ಗಳಿಸುವ ಸದಸ್ಯರಾಗಿರುತ್ತಾರೆ.

ಅನುಮಾನದ ಪಿಡುಗು: ವಾಣಿಜ್ಯಮಯವಾಗಿರುವ ವೈದ್ಯಕೀಯ ವೃತ್ತಿ, ಕಾನೂನಿನಡಿಯಲ್ಲಿ ವೈದ್ಯಕೀಯ ಸೇವೆಯನ್ನು ನಿಯಂತ್ರಿಸಲು ಅನುಸರಿಸುತ್ತಿರುವ ಪದ್ಧತಿಗಳು, ತಮ್ಮ ಸೇವಾ ಭದ್ರತೆಗಾಗಿ ವೈದ್ಯರುಗಳು ಅನುಸರಿಸುತ್ತಿರುವ ದುಬಾರಿ ಬೆಲೆಯ ರೋಗಪತ್ತೆ ವಿಧಾನಗಳನ್ನೊಳಗೊಂಡ ರಕ್ಷಣಾತ್ಮಕ ವೈದ್ಯಕೀಯ ಸೇವೆ, ಹದಗೆಟ್ಟ ಆಡಳಿತಾತ್ಮಕ, ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆ ಇತ್ಯಾದಿ ಕಾರಣಗಳಿಂದಾಗಿ ವೈದ್ಯ- ರೋಗಿಯ ನಡುವಿನ ಆತ್ಮವಿಶ್ವಾಸದ ಕೊಂಡಿ ಕಳಚಿಬೀಳುತ್ತಿದ್ದು, ಒಬ್ಬರನ್ನೊಬ್ಬರು ಸಂಶಯದಿಂದ ನೋಡುವಂತಾಗಿ ಪವಿತ್ರವಾದ ವೈದ್ಯಕೀಯ ಸೇವೆ ಇಂದು ಅಡ್ಡದಾರಿ ಹಿಡಿಯುತ್ತಿದೆ.

ರೋಗಿ ವೈದ್ಯರನ್ನು ನೋಡುವ ಮುನ್ನ ಅವನು ಎಲ್ಲಿ ನನ್ನನ್ನು ಸುಲಿದುಬಿಡುತ್ತಾನೋ ಎಂಬ ಅನುಮಾನ ರೋಗಿಗೆ. ರೋಗಿ ತನ್ನನ್ನು ಯಾವ ಕಾನೂನು ಕಟ್ಟಳೆಗೆ ಎಳೆದು ಬಿಡುತ್ತಾನೋ ಎಂಬ ಆತಂಕ ವೈದ್ಯನಿಗೆ ಉಂಟಾಗಿರುವ ಸಂದಿಗ್ಧ ಅನುಮಾನದ ಸನ್ನಿವೇಶ ಇಂದು ನಿರ್ಮಾಣವಾಗಿದೆ. ಅನುಮಾನದ ಪರಿಸರದಲ್ಲಿ ವೈದ್ಯ ರೋಗಿಯ ನಡುವೆ ಆತ್ಮವಿಶ್ವಾಸ ಬೆಳೆಯಲು ಸಾಧ್ಯವೇ? ಖಂಡಿತಾ ಇಲ್ಲ.

ವೈದ್ಯ ಎಲ್ಲ ರೋಗಗಳನ್ನು ವಾಸಿ ಮಾಡುವ ಜೈವಿಕ ಯಂತ್ರವಲ್ಲ. ಪ್ರತಿಯೊಂದು ಕಾಯಿಲೆಗೂ ತನ್ನದೇ ಆದ ಭವಿಷ್ಯಗತಿಯಿದ್ದು, ಸಮರ್ಥವಾಗಿ ಚಿಕಿತ್ಸೆ ನೀಡಿದರೂ ವಾಸಿಯಾಗದೇ ಸಾವನ್ನಪ್ಪುವ ಸಾಧ್ಯತೆಗಳು ಬಹಳ. ತೀವ್ರ ನಿಗಾ ಘಟಕದ ರೋಗಿಗಂತೂ ಅಲ್ಲಿಂದ ಹೊರಬರುವವರೆಗೆ ಜೀವ ಭಯ ಇದ್ದೇ ಇರುತ್ತದೆ.

ಕ್ರೀಮ್ ಆಫ್ ದಿ ಸೊಸೈಟಿ: ವೈದ್ಯಕೀಯ ಶಿಕ್ಷಣಕ್ಕೆ ಆಯ್ಕೆಯಾಗುವವರು ಅತ್ಯಂತ ಜಾಣರು, ಹೆಚ್ಚು ಅಂಕಗಳಿಸಿದವರು ಎಂಬುದರಲ್ಲಿ ಎರಡು ಮಾತಿಲ್ಲ. ಸೀಟು ಸಿಕ್ಕಾಗ ಹಮ್ಮು, ಬಿಮ್ಮುಗಳಿಂದ ಬೀಗುತ್ತಿದ್ದವರು ಡಿಗ್ರಿ ಮುಗಿಸಿ ಹೊರ ಬರುವ ಹೊತ್ತಿಗೆ, ವೈದ್ಯಕೀಯ ಶಿಕ್ಷಣ ಆಯ್ಕೆ ಮಾಡಿದ್ದೇ ತಪ್ಪಾಯ್ತೆಂದು ಮನಸಿನಲ್ಲಿಯೇ ಮರುಗುತ್ತಿರುತ್ತಾರೆ. ಬಾಯಿ ಬಿಟ್ಟು ಹೇಳುವಂತೆಯೂ ವಾತಾವರಣ ಇರುವುದಿಲ್ಲ, ಕೇವಲ ವೈದ್ಯಕೀಯ ಪದವಿ ಪಡೆದರೆ ಪ್ರಯೋಜನವಿಲ್ಲ. ಸ್ನಾತಕೋತ್ತರ ಪದವಿ ಬೇಕು. ಸೂಪರ್ ಸ್ಪೆಷಾಲಿಟಿ ಕಾಲ ಇದು. ಅದಕ್ಕೂ ಸಜ್ಜಾಗಬೇಕು. ಒಟ್ಟಿನಲ್ಲಿ ವೈದ್ಯನಾಗಿ ಬದುಕು ಪ್ರಾರಂಭಿಸುವ ಹೊತ್ತಿಗೆ ಮೂರು ದಶಕಗಳು ಮುಗಿದಿರುತ್ತವೆ. ನಂತರ ಕ್ಲಿನಿಕ್/ಆಸ್ಪತ್ರೆ ಪ್ರಾರಂಭಿಸಲು ಬಿಲ್ಡಿಂಗ್ ಬೇಕು, ಯಂತ್ರೋಪಕರಣ ಬೇಕು, ಪ್ಯಾರಾ ಮೆಡಿಕಲ್ ಸಿಬ್ಬಂದಿ ಬೇಕು. ಇಷ್ಟೊತ್ತಿಗೆ ತಲೆಯ ಮೇಲೆ ಕೈ ಹೊತ್ತು ಕೂಡುವುದೊಂದು ಬಾಕಿ. ಮತ್ತೆ ಬ್ಯಾಂಕಿನ ಸಾಲಕ್ಕೆ ಮೊರೆ ಹೋಗಬೇಕು. ಕಲಿಯುವಾಗಿನ ಸಾಲ, ಬಿಲ್ಡಿಂಗ್, ಯಂತ್ರೋಪಕರಣಗಳ ಸಾಲ, ಒಟ್ಟಿನಲ್ಲಿ ಸಾಲದ ಸುಳಿಯಲ್ಲಿ ಸಿಕ್ಕು ಗಿರ ಗಿರ ತಿರುಗುತ್ತಿರುತ್ತಾನೆ. ಹೊರಬರುವ ದಾರಿ ಕಾಣದೆ. ಸರಕಾರ ಸಣ್ಣ ಕೈಗಾರಿಕೆ ಉದ್ದಿಮೆ ಪ್ರಾರಂಭಿಸುವವರಿಗೆ ಎಲ್ಲ ಹಂತದಲ್ಲೂ ಸಬ್ಸಿಡಿ ಸಿಗುತ್ತದೆ. ಆದರೆ, ವೈದ್ಯಕೀಯ ಕ್ಷೇತ್ರದಲ್ಲಿ ಇವುಗಳಿಗೆ ಅವಕಾಶವೇ ಇಲ್ಲ.

ಸರಕಾರ ಸಕ್ಕರೆ ಲೇಪಿತ ಕಹಿ ಗುಳಿಗೆಗಳನ್ನು ನಿತ್ಯ ನೂರಾರು ಆಶ್ವಾಸನೆಗಳ ರೂಪದಲ್ಲಿ ಜನರಿಗೆ ನೀಡುತ್ತಿದೆ. ವೈದ್ಯಕೀಯ ಶಿಕ್ಷಣದ ವೆಚ್ಚ ತಗ್ಗಿಸುವ, ವೈದ್ಯರಿಗೂ ಸಬ್ಸಿಡಿ ಕೊಡುವ ಬಗ್ಗೆ ಕಿಂಚಿತ್ತೂ ಯೋಚಿಸದೇ ಇರುವುದು ದೊಡ್ಡ ದುರಂತವೇ ಸರಿ. ಇವುಗಳತ್ತ ನಮ್ಮ ಜನಪ್ರತಿನಿಧಿಗಳು ಬಾಯಿ ಬಿಡುವುದಿಲ್ಲ. ಏಕೆಂದರೆ, ಬಹುತೇಕ ವೈದ್ಯಕೀಯ ಕಾಲೇಜುಗಳ ಮಾಲೀಕರು ಅವರೇ ಆಗಿರುತ್ತಾರೆ. ವೈದ್ಯಕೀಯ ಸೇವೆ ಜನಸಾಮಾನ್ಯರಿಗೆ ಹೊರೆ ಆಗುತ್ತಿದೆ ಎಂಬ ಅರಿವು ನಮ್ಮನ್ನಾಳುವ ಪ್ರಭುಗಳಿಗೆ ಇದೆ. ಇದರ ಬಗ್ಗೆ ಗಂಟೆಗಟ್ಟಲೇ ಬಡಾಯಿ ಕೊಚ್ಚುತ್ತಾರೆ. ವೈದ್ಯಕೀಯ ಸೇವೆಯು ದುಬಾರಿಯಾಗಿರುವುದರ ಹಿನ್ನೆಲೆ ಅವರಿಗೆ ಸಂಪೂರ್ಣಗೊತ್ತಿದೆ. ಆದರೆ, ಅದನ್ನು ತಗ್ಗಿಸುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಲು ಅವರೆಂದೂ ಬಾಯಿ ಬಿಡುವುದಿಲ್ಲ, ಸ್ವಲ್ಪವೂ ತಲೆ ಬಿಸಿ ಮಾಡಿಕೊಳ್ಳುವುದಿಲ್ಲ.

ಅಂಗೈಯಲ್ಲಿ ಅರಮನೆ : ಅಂಗೈಯಲ್ಲಿ ಅರಮನೆ ತೋರಿಸುವಲ್ಲಿ ಅವರು ನಿಸ್ಸೀಮರು. ಅಷ್ಟೇ ಅಲ್ಲ ಪರದೇಶಕ್ಕೆ ಹೋದಾಗ ವೈದ್ಯರನ್ನು ಹಿಗ್ಗಾಮುಗ್ಗ ಬೈಯ್ಯುವುದು, ಅವಹೇಳನ ಮಾಡುವುದರಲ್ಲೂ ನಿಸ್ಸೀಮರು. ಉತ್ತಮ ವೈದ್ಯಕೀಯ ಸೇವೆಯ ಹೆಸರಿನಲ್ಲಿ ಕಾರ್ಪೊರೇಟ್ ಆಸ್ಪತ್ರೆಗಳು ನಗರ ಪ್ರದೇಶಗಳಲ್ಲಿ ನಾಯಿಕೊಡೆಗಳಂತೆ ಬೆಳೆಯುತ್ತಿದೆ. ಬಡವರಿಗೆ ಇಲ್ಲಿಯ ವೈದ್ಯಕೀಯ ಸೇವೆ ಗಗನಕುಸುಮವೇ ಸೈ.

ಇತ್ತೀಚೆಗೆ ಅಳವಡಿಸಲಾಗಿರುವ ಕ್ಯಾಷ್‌ಲೆಸ್ ಎನ್ನುವ ಇನ್ಶೂರೆನ್ಸ್ ಆಧಾರಿತ ವೈದ್ಯಕೀಯ ಚಿಕಿತ್ಸೆ, ವೈದ್ಯಕೀಯ ಸೇವೆಯನ್ನು ಇನ್ನಷ್ಟು ತುಟ್ಟಿಯಾಗಿಸಿದೆ ಎನ್ನುವ ಆರೋಪ ಕೇಳಿ ಬರುತ್ತಿದೆ. ಒಟ್ಟಾರೆ ‘ವೈದ್ಯಕೀಯ ಸೇವೆ ’ಯನ್ನು ‘ಸುಲಿಗೆ ’ಎಂಬ ಪಟ್ಟಕ್ಕೆ ಕಟ್ಟುವ ಮೊದಲು ಇದಕ್ಕೆ ಕಾರಣವಾದ ಅಂಶಗಳನ್ನು ಪಟ್ಟಿ ಮಾಡಿ ಚರ್ಚಿಸಿ, ಅವುಗಳನ್ನು ನಿಯಂತ್ರಿಸಲು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲು ಸರಕಾರ ಮುಂದಾಗಬೇಕು. ಇಲ್ಲದೇ ಹೋದಲ್ಲಿ ವೈದ್ಯ ಖಳನಾಯಕನಾಗಿ ಕಾಣುವುದರಲ್ಲಿ ಸಂದೇಹವಿಲ್ಲ. ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಪವಿತ್ರ ವೈದ್ಯಕೀಯ ಕ್ಷೇತ್ರಕ್ಕೆ ಮಸಿ ಬಳಿಯುವ ಕೆಲಸವನ್ನು ಸರಕಾರ ಕೈಬಿಡಬೇಕು. ಮೊಸಳೆ ಕಣ್ಣೀರಿನ ನಾಟಕಕ್ಕೆ ನಾಂದಿ ಹಾಡಬೇಕು.

ವೈದ್ಯೋ ರಕ್ಷಿತೋ ರಕ್ಷಿತಃ. ಆದರೆ, ವೈದ್ಯರ ಮೇಲೆ ಹಲ್ಲೆ ಮಾಡಿದ ಜನಪ್ರತಿನಿಧಿಗಳ ದೊಡ್ಡ ಪಟ್ಟಿಯೇ ಇದೆ. ಅವರು ಎಲ್ಲ ಪಕ್ಷಗಳಲ್ಲೂ ಇದ್ದಾರೆ. ಕಾನೂನು ಕೈಗೆತ್ತಿಕೊಳ್ಳಬಾರದು ಎಂಬುದು ಎಲ್ಲರಿಗೂ ಗೊತ್ತಿದ್ದರೂ, ಸಮಸ್ಯೆಯ ದೂರು, ವಿಚಾರಣೆಯನ್ನು ಸಹನೆ, ಸಂಯಮದಿಂದ ನೋಡುವ ದೃಷ್ಟಿಗೆ ಪೂರೆ ಬಂದಿದೆ. ಅವುಗಳಿಗೆ ಇಂದು ಸಮಾಜದಲ್ಲಿ ಸ್ಥಾನವಿಲ್ಲ. ಎದುರಿಗೆ ಇದ್ದವನಿಗೆ ನಾಲ್ಕು ಬಿಗಿಯುವುದೇ ಎಲ್ಲದಕ್ಕೂ ಪರಿವಾರ ಎನ್ನುವ ಪೊಲೀಸ್ ವ್ಯವಸ್ಥೆಯ ಮೂಲ ಸೂತ್ರವನ್ನೇ, ಈಗ ಭವ್ಯ ಭಾರತದ ಸಮಾಜವು ತಾರಕ ಮಂತ್ರವಾಗಿ ಸ್ವೀಕರಿಸಿದಂತಿದೆ.